ಉತ್ತಮ ಕಾಫೀ
ಸುವಾಸನೆ! ಅತ್ಯಂತ ರುಚಿ!
ಯಾವಾಗಲೂ ಲಕ್ಷ್ಮಿನಾರಾಯಣ
ಕಾಫೀಪುಡಿಯನ್ನೇ ಉಪಯೋಗಿಸಿ.
ಲಕ್ಷ್ಮಿನಾರಾಯಣ ಕಾಫೀವರ್ಕ್ಸ್!
ಕೊಳ್ಳೇಗಾಲ.

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Weekly SATYAVADI Founded 1917

ಸತ್ಯವಾದಿ

ಸಂಚಿಕೆ 26) ಶನಿವಾರ 9—1—1943 (ಸಂಪುಟ 83

Regd No. M. 1299
ವಾರಪತ್ರಿಕೆ ೬ ಕಾಸು

MLMS & S
ಮಂಗಳೂರು ಸುವರ್ಣ
ಸ್ಪೆಷಲ್ ಬೀಡಿಯನ್ನೇ
ಉಪಯೋಗಿಸಿ. ಒಳ್ಳೇ ನಿಪ್ಪಾನಿ ಹೊಗೇ ಸೊಪ್ಪಿನಿಂದ ತಯಾರಿಸಿರುತ್ತೆ. ಒಂದಾವರ್ತಿ ಪರೀಕ್ಷಿಸಿ ನೋಡಿ.
ಮೈಸೂರು ಏಜೆಂಟರು, ಪಿ. ಮಂಜಪ್ಪ
ಬೇರೆ ಸ್ಥಳಗಳಿಗೆ ಏಜೆಂಟರು ಬೇಕು.

ಜಪಾನಿನ ಪ್ರಬಲ ಬಲ

ನ್ಯೂ ಬ್ರಿಟನ್ನಿನಲ್ಲಿ ರಾಬೂಲಿನ ಕಡೆಗೆ ಜಪಾನರು ತಮ್ಮ ಸಮರ ಸನ್ನಾಹಗಳನ್ನು ಅತ್ಯಧಿಕವಾಗಿ ಒದಗಿಸುತ್ತಿದ್ದಾರೆಂದು ತಿಳಿಯಬಂದಿದೆ ಇಲ್ಲಿಯವರೆಗೆ ರಾಬೂಲಿನಲ್ಲಿ ಎಂದೂ ಇಷ್ಟು ಬಲವನ್ನು ತಂದಿರಲಿಲ್ಲ. ಸಾಲೊಮನ್ಸ್ ದ್ವೀಪಗಳ ಮೇಲೆ ಆಕ್ರಮಣ ನಡೆಸಿದಾಗ ತಂದಿದ್ದುದನ್ನೂ ಇದು ಮೀರಿಸುತ್ತಿರುವುದಾಗಿ ಅಭಿಪ್ರಾಯ.

ಅಲ್ಲಿಯ ಪ್ರಧಾನ ಮಂತ್ರಿ ಮಿ || ಕರ್ಟಿನ್ನರು ವಾಷಿಂಗ್‌ಟನ್ನಿಗೆ ಹೋಗಿ ಹೆಚ್ಚು ಸಹಾಯವನ್ನು ಪಡೆಯಲು ರೂಸ್‌ವೆಲ್ಟರನ್ನು ಕಾಣತಕ್ಕದ್ದೆಂದು ಸೂಚಿಸಲಾಗಿದೆ.

ಾ ಂ

ಜಪಾನರಿಗೆ ಎಚ್ಚರಿಕೆ

ಪ್ರೆ || ರೂಸ್‌ವೆಲ್ಟರು ಜಪಾನಿಗೆ ಎಚ್ಚರಿಸಿ "ನಿಮ್ಮ ದೇಶಕ್ಕೇ ಯುದ್ಧವನ್ನು ಹರಡಿಸುತ್ತೇವೆ. ಶತ್ರು ರಾಷ್ಟ್ರಗಳು ಯುದ್ಧಾನಂತರ ನಿಶ್ಶಸ್ತ್ರ ಮಾಡಲ್ಪಟ್ಟು ಉಳಿಸಲ್ಪಡುವುವು. ದಕ್ಷಿಣ ಭೂಮಧ್ಯ ಸಮುದ್ರದಿಂದ ಶತ್ರು ಬಲವು ಅಟ್ಟಲ್ಪಡುವುವು" ಎಂದಿದ್ದಾರೆ.

ಂ ಂ

ತಾಜಾ ಸಮಾಚಾರ

ವೀರ ಸಪಾರ್ಕರರ ಅರವತ್ತನೆ ವರ್ಧಂತಿಯು 28—5—43 ರಲ್ಲಿ ನಡೆಯುವುದು. ಆಗ ಪೂನಾದಲ್ಲಿರುವ ಹಿಂದೂಮಹಾಸಭೆಯವರು ಹತ್ತು ಲಕ್ಷ ರೂಪಾಯಿಗಳ ನಿಧಿಯನ್ನು ಚಂಧಾ ಮೂಲಕ ಸೇರಿಸಿ ಅವರಿಗೆ ಕೊಡಬೆಂದಿರುವರು.

ಂ ಂ

ಅಮೇರಿಕಾ ಸೈನ್ಯಕ್ಕೆ ಮೊದಲು ಸೇರಿಸಿಕೊಳ್ಳಬೇಕೆಂದಿದ್ದ ಸ್ತ್ರೀಯರ ಸಂಖ್ಯೆಯು 15000 ರಿಂದ ಅದರೆಡರಷ್ಟನ್ನೂ ಮೀರುವುದಾಗಿರುವುದೆಂದು ತಿಳಿಯ ಬಂದಿದೆ,

ಹುಚ್ಚೋ ಬೆಪ್ಪೋ ?

ಹಿಟ್ಲರಿನ ಗಗನೆ ಕುಸುಮಗಳಲ್ಲಿ ಇದು ಒಂದು ಮೆಡಿಟರೇನಿಯನ್ ಸಮುದ್ರವನ್ನು ಒಂದು ತೊಟ್ಟು ನೀರಿಲ್ಲದಂತೆ ಮಾಡಿ ಆ ಪ್ರದೇಶವನ್ನು ಸಾಗುವಳಿಗೆ ಲಾಯಖ್ಖಾಗುವಂತೆಮಾಡಬೇಕೆಂದು ಜರ್ಮನಿಯ ಇಂಜನಿಯರುಗಳು ಯೋಚನೆ ಮಾಡುತ್ತಿರುವರು, ಜರ್ಮನಿಯವರು ಮುಂದೆ ರಾಜ್ಯ ವಿಭಾಗಮಾಡುವಾಗ ಇದನ್ನು ನ್ಯೂವಲ್ಡ್ ಆರೆಡರ್‌ನಲ್ಲಿ ಸೇರಿಸುವರಂತೆ. ಜಿಬ್ರಾಳ್ಟರಗೂ ಆಲ್ಜೇರಿಯಾಕ್ಕೂ ಅಣೆ ಕಟ್ಟು ಕಟ್ಟುವುದರಿಂದ ಸಮುದ್ರವು 336 ಅಡಿ ಇಳಿಯುವುದಂತೆ. ಮತ್ತೊಂದು ಅಣೆ ಕಟ್ಟನ್ನು ಮ್ಯಾನಿಗೂ ಸಿಸಲಿಗೂ ಕಟ್ಟುವುದರಿಂದ ಮತ್ತೆ 330 ಅಡಿ ನೀರು ಕಮ್ಮಿಯಾಗುವುದು ಹೀಗೆ ನೀರು ಕಮ್ಮಿಯಾದ್ದರಿಂದ ಸಮುದ್ರ ಸುತ್ತಲೂ ಇರುವ ಭೂಮಿಯಲ್ಲಿ ಸಾವಿರಾರು ಮೈಲಿಗಳ ಭೂಮಿಯು ವ್ಯವಸಾಯಕ್ಕೆ ಬರುವುದು ಹೀಗೆ ಕಟ್ಟುವ ಎರಡು ಅಣೆಕಟ್ಟುಗಳಿಂದ ಎಲೆಕ್ಟ್ರಿಕ್ ಶಕ್ತಿಯನ್ನು ತಯಾರು ಮಾಡುವರು. ಅಲದೆ ಇಂಗ್ಲೀಷ್ ಅಮೇರಿಕನ್ ನಾವೆಗಳು ಮೆಡಿಟರೇನಿಯನ್ ಸಮುದ್ರದಲ್ಲಿ ಕಾಲಿಡಲು ಆಗುವುದೇ ಇಲ್ಲವಂತೆ!

ಂ ಂ

ಬೇಧಭಾವನೆ ತಪ್ಪಲಿಲ್ಲ.

ಇನ್ನೂ ಆಂಗ್ಲೋ ಇಂಡಿಯನ್ನರು ತಮ್ಮ ಪ್ರತಾಪವನ್ನು ಭರತಖಂಡದಲ್ಲಿ ಬಿಟ್ಟಿಲ್ಲ. ಮದರಾಸಿನಲ್ಲಿ ಒಂದು ಕ್ಲಬ್ಬಿರುವುದು. ಅದರ ಹೆಸರು ಮದರಾಸ್ ಕ್ಲಬ್. ಇದಕ್ಕೆ ಅಲ್ಲಿಯ ಆಂಗ್ಲೋ ಇಂಡಿಯನ್‌ರೆ ಮೆಂಬರು- ಈಗ ಯುದ್ಧಕ್ಕೆ ಒಂದಿರುವ ಆಂಗ್ಲೇಯರನ್ನು ಅದಕ್ಕೆ ನೇರಿಸಿರುತ್ತಾರೆ ಆದರೆ ಹಿಂಮಾಸ್ಥಾನದವರು ಆ ಕ್ಲಬ್ಬಿಗೆ ಕಾಲಿಡಕೂಡದು. ಆದರೆ ಯುದ್ಧಮಾಡುತ್ತಿರುವುದು ಎಲ್ಲರಿಗಾಗಿ!

— ಗುಲ್ಮ —
ಎಲ್ಲಾ ತರಹದ ಜೀರ್ಣಕೋಶದ ವ್ಯಾಧಿಗಳಿಗೆ (ಹೊಟ್ಟೆ ನೋವು, ತೇಗು, ಎದೆ ನೋವು, ಎದೆಉರಿ, ಪಕ್ಕಶೂಲೆ, ವಾಂತಿ, ಬಾಯಿ ನೀರು) ಇವುಗಳಿಗೆಲ್ಲಾ ನಮ್ಮಲ್ಲಿ ಖಾತಿಯಾದ ಔಷಧಿ ದೊರೆಯುತ್ತದೆ.
ಅಪೇಕ್ಷಿಸುವರು ಚಿಹ್ನೆಗಳನ್ನು ಕುರಿತು 0—1—6 ಸ್ಟಾಂಪಿನೂಡನೆ ಬರೆಯಿರಿ.
ಎಸ್. ಲಿಂಗೇಗೌಡ,
ಕುರುಬರ ಬೀದಿ, ಕೊಳ್ಳೇಗಾಲ.

WONDERFUL REMEDY.
for all Digestive Troubles
A speciality in gastric ulsers, duedamal ulcers. Radical cure guaranteed. Apply to—
S. Lingai Gowda
Kurubar Street, Kollegal

ಡಿ ಸೆಂಟಿಸ್ಟ್ರೆಡ್
ಆಮಶಂಕೆ ಅತಿಸಾರಕ್ಕೆ
ಸಂಜೀವನ
ಪ್ಯಾಕೆಟ್ ಒಂದಕ್ಕೆ ೨ ಆಣೆ
ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುತ್ತದೆ

Edited, Printed & published by M. S. Krishna Rao, at the Satyavadi Press, Chamaraja Agrahar, Mysore.

ಶ್ರೀ 'ಓಂ' ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ
ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.
ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಹಾಲು ಪಾನೀಯಗಳು
ನಮ್ಮಲ್ಲಿ ಒಂದು ವಿಶೇಷವೆ ಸರಿ
ಕೆನೆ, ಬೆಣ್ಣೆ, ಅತಿ ಮಧುರವಾದ ಕ್ರೀಮ್, ಇವುಗಳಿಗೆ
ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋನ್ ಮಾಡಿ
ಸಿಟಿಸನ್ಸ್ ಡೈರಿ ಟೆಲಿಫೋನ್ ನಂಬರು 492
ಹಳೇಪೋಸ್ಟಾಫೀಸ್‌ರಸ್ತೆ, ಮೈಸೂರು

ಜರ್ಮನಿಯು ಬೀಳುವುದಿಲ್ಲ

ಹರ ಹಿಟ್ಲರ್‌ರವರ ಸಂದೇಶ

ಹೊಸವರ್ಷದ ಆರಂಭದಲ್ಲಿ ಹರ್ ಹಿಟ್ಲರ್‌ರವರು ತಮ್ಮ ಸೈನಿಕರಿಗೆ ಈ ರೀತಿ ಸಂದೇಶವನ್ನಿತ್ತಿದ್ದಾರೆ–

"ನಾರ್ವೆಯಿಂದ ಸ್ಪೇನಿನ ಗಡಿಯವರೆಗೆ ಜರ್ಮನಿಯ ಸೈನಿಕರು ಶತ್ರುಗಳ ಕಾರ್ಯಾಚರಣೆಯು ತಡೆಯುವಂತೆ ಮಾಡಲು ಸಿದ್ಧರಾಗಿದ್ದಾರೆ. ಯಾವ ಪ್ರದೇಶದಲ್ಲಿ ಶತ್ರುವು ಮೇಲೆ ಬೀಳಲು ಬಂದರೂ ಜರ್ಮನಿ ಸೈನಿಕರು ಹೊಡೆದೋಡಿಸುವರು. ಈಗ ಆರಂಭವಾಗಲಿರುವ ಹೊಸ ವರ್ಷವು ಹಿಂದಿನ ವರ್ಷಗಳಂತೆಯೇ ಕಷ್ಟತೆರನಾಗಿರುವುದು. ಜರ್ಮನಿಯ ಸೈನಿಕರು ಅನುಭವಿಸಬೇಕಾದ ಕಷ್ಟನಷ್ಟಗಳು ಅಪಾರವಾಗಿವೆ. ಅವರು ಅನುಭವಿಸುವ ಕಷ್ಟನಷ್ಟಗಳಿಗೆ ಪ್ರತಿಫಲ ದೊರಕದೆ ಹೋಗುವುದಿಲ್ಲ. ಜರ್ಮನಿಯ ಸ್ವಾತಂತ್ರ್ಯ ಮತ್ತು ಇರವಿಕೆಯನ್ನು ಕಾಪಾಡಿಕೊಂಡು ಬರುವುದಕ್ಕೆ ಹೋರಾಡತ್ತಿರುವ ಜರ್ಮನಿ ಸೈನಿಕರು ಶತ್ರುಗಳಿಗೆ ದೇವರು ಹಿಂದಿನ ವರ್ಷಗಳಂತೆ ಜಯವನ್ನು ಕರುಣಿಸುವನೆಂದು ನಂಬಬೇಕು" ಎಂದು ಸೂಚಿಸಿದ್ದಾರೆ.

ತಮ್ಮ ಸಂದೇಶವನ್ನು ಮುಕ್ತಾಯಗೊಳಿಸುತ್ತಾ ಹರ್ ಹಿಟ್ಲರ್‌ರವರು "ಮುಂದಿನ ವರ್ಷದಲ್ಲಿ ಜರ್ಮನಿಯು ತನ್ನ ಅಪಾರ ಪ್ರಯತ್ನವನ್ನು ನಡೆಸದು. ಛಳಿಗಾಲವು ಬಹಳ ಉಗ್ರವಾಗಿರಬಹುದು. ಆದರೆ ಹಿಂದಿನ ವರ್ಷಕ್ಕಿಂತ ಅದು ಉಗ್ರವಾಗಿರುವುದಿಲ್ಲ- ಛಳಿಗಾಲವು ಕಳೆದ ಮೇಲೆ ನಾವು ಪುನಃ ನಮ್ಮ ವಿಜಯ ಯಾತ್ರೆಯನ್ನು ಮುಂದುವರಿಸುವೆವು. ಛಳಿಗಾಲವು ಮುಗಿದನಂತರ, ಹಿಂದು ಬಲದ ಪತನವಾಗುವುದು. ಆ ಬಲವು ಜರ್ಮನಿಯಾಗಿರುವುದಿಲ್ಲ. ಅದು ಖಂಡಿತ. ಅನಂತರ ಜರ್ಮನಿ ಪ್ರಜೆಗಳು ಬಹಳ ಕಾಲ ಶಾಂತಿಯಿಂದ ಕೂಡಿದವರಾಗಿದ್ದು ಆ ಶಾಶ್ವತ ಸುಖವನ್ನು ಅನುಭವಿಸುವರು. ಆ ಶಾಂತ ಸಮಯದಲ್ಲಿ ತಮ್ಮ ಮುಂದಿರುವ ಆದರ್ಶವನ್ನು ಸಾಧಿಸಿಕೊಳ್ಳಲು ಯತ್ನಿಸುವರು" ಎಂಬುದಾಗಿ ನುಡಿದಿದ್ದಾರೆ.

ಈಗ ನಡೆಸುತ್ತಿರುವ ಸಂಗ್ರಾಮವು ಜರ್ಮನಿಗೆ ಬಹಳ ಉಗ್ರವಾದದೆಂದೂ ಜರ್ಮನಿಯ ಭವಿಷ್ಯವನ್ನೇ ಇತ್ಯರ್ಥಗೊಳಿಸುವಂತಹವೆಂದೂ ಹರ್ ಹಿಟ್ಲರ್‌ರವರು ಎಚ್ಚರಿಕೆ ಇತ್ತಿದ್ದಾರೆ

ಇದೇ ಅರ್ಥವೊರುವ ರೀತಿಯಲ್ಲಿ ಡಾ|| ಗೊಯಬಲ್ಸ್‌ರವರೂ ಶ್ರೀ ಗೊಯರಿಂಗ್‌ರವರೂ ಜರ್ಮನಿಯ ಪ್ರಜೆಗಳಿಗೆ ಸಂದೇಶವನ್ನಿತ್ತಿದ್ದಾರೆ. ಜರ್ಮನಿಯ ಪ್ರಜೆಗಳೂ ಸೈನಿಕರೂ ಇನ್ನು ಹೆಚ್ಚು ತ್ಯಾಗಮಾಡಬೇಕೆಂದೂ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುವುದೆಂದೂ ಎಚ್ಚರಿಕೆ ಇತ್ತಿದ್ದಾರೆ.

ಅಕ್ರಮಿತ ದೇಶದ ಪ್ರಜೆಗಳಿಗೆ ಏರ್ಪಟ್ಟಿರುವ ನರಕ ಜೀವನ

ಹೊಟ್ಟೆಗಾಗಿ ಹಾಹಾಕಾರ

ಹಾಂಗ್‌ಕಾಂಗಿನಲ್ಲಿ—ಜಪಾನೀಯರ ಕೃಪೆಯಿಂದ–ಇಲ್ಲಿ ಮನುಷ್ಯಮಾಂಸದ ವ್ಯಾಪಾರವಾಗುತ್ತಿದೆ ಪ್ರತಿದಿನವೂ 500 ರಿಂದ 700 ಮಂದಿ ಜನರು ಸಾಯುತ್ತಿದ್ದಾರೆ. ಇವರಲ್ಲಿ ಒಹುಮಂದಿ ಸಾಯುತ್ತಿರುವುದು ಹೊಟ್ಟೆಗಿಲ್ಲದೆ; ಯಾವಾಗಾದರೂ ರೇಷನ್‌ಮೂಲಕ ಆಹಾರ ಪದಾರ್ಥಗಳು ದೊರಕುವ ಅದೃಷ್ಟವಿದ್ದರೆ, ದಿನಕ್ಕೆ ಒಂದೂಕಾಲು ಪೌಂಡು ತೂಕದ ಹಿಟ್ಟು ಮತ್ತು ಇಪ್ಪತ್ತೈದು ತೊಲ ತೂಕದ ಕರಿಯ ಒಣಾಣಿ ದೊರಕುತ್ತದೆ. ಆದರೆ ಅದೇ ಚೀನೀಯರಿಗಾದರೋ ಒಂದುದಿನಕ್ಕೆ 20 ತೊಲ ಅಕ್ಕಿ ಕೊಡುತ್ತಾರೆ. ಅಷ್ಟೆ, ಇನ್ನೇನೂ ಇಲ್ಲ

ಫ್ರಾನ್ಸಿನಲ್ಲಿ—ಜರ್ಮನರ ಕೃಪೆಯಿಂದ–ಅಮೆರಿಕಾದಲ್ಲಿ ಐದಾಣೆ ಬೆಲೆಗ ದೊರಕುವ ಬ್ರೆಡ್ಡು ಫ್ರಾನ್ಸಿನಲ್ಲಿ ಒನರಿಗೆ ಬಂದು ದಿನಕ್ಕೆಲ್ಲಾ ಕೊಡುವ ಬ್ರೆಡ್ಡಿಗಿಂತಲೂ ಎಷ್ಟೊ ಹೆಚ್ಚಾಗಿರುತ್ತದೆ. ಅಮೆರಿಕಾದಲ್ಲಿ ಮುಷ್ಟಿ-ಮನುಷ್ಯನಿಗೆ ಒಂದು ದಿನಕ್ಕೆ ಸಿಗುವ ಮಾಂಸವು ಫ್ರಾನ್ಸಿನಲ್ಲಿ ಒಂದು ವಾರಕ್ಕೆಲ್ಲಾ ದೊರಕುವುದಕ್ಕಿಂತ ಹೆಚ್ಚಾಗಿರುತ್ತದೆ ಅಮೆರಿಕಾದಲ್ಲಿ ಒಬ್ಬನಿಗೆ ಒಂದು ದಿನಕ್ಕೆಂದು ದೊರಕುವ ಬೆಣ್ಣೆಯಷ್ಟು ಫ್ರಾನ್ಸಿನಲ್ಲಿ ಒಬ್ಬನಿಗೆ ಒಂದು ವರ್ಷದ್ದನ್ನೆಲ್ಲಾ ಸೇರಿಸಿದರೂ ಆಗುವುದಿಲ್ಲ,

ಇಟಲಿಯಲ್ಲಿ–ಇಲ್ಲಿನ ಜನರ ಅತ್ಯಂತ ಪ್ರಿಯವಾದ ಮತ್ತು ನಿತ್ಯಗಟ್ಟಲೆಯ ಆಹಾರವೆಂದರೆ ಮೆಕರೋನಿ ಎಂಬುದು. ಈಗ ದೊರಕುತ್ತಿರುವ ಮೆಕರೋನಿಯನ್ನು ಮನುಷ್ಯ ಮಾತ್ರದವರು ತಿನ್ನುವಂತಿಲ್ಲ. ಇದು ಹಿಟ್ಲರನ ಕೃಪಾ ಕಟಾಕ್ಷದ ಮಹಿಮೆ.

ಷಾಂಗ್ಹೈಯಲ್ಲಿ—ಜಪಾನೀಯರ ಆಕ್ರಮಣ ಪರಿಣಾಮವಾಗಿ, ಮೊದಲಿಗೆ ಬಂದ ಅಕ್ಕಿಯ ಬೆಲೆ 39 ರೂಪಾಯಿ ಇದ್ದದ್ದು ಈಗ 1,350 ರೂಪಾಯಿ ಆಗಿದೆ ಯಾಕೆಂದರೆ ಅಲ್ಲಿ ಬಿಡಾರಮಾಡಿರುವ ಜಪಾನೀ ಸೈನಿಕರಿಗೆ ಬೇಕಾದಷ್ಟನ್ನು ತೆಗೆದುಕೊಂಡು ಉಳಿದಿದ್ದನ್ನು ಇತರರಿಗೆ ಕೊಡುವುದು ಒಂದು ಕಾರಣ. ಇನ್ನೊಂದು ಕಾರಣವೇನೆಂದರೆ, ಅಲ್ಲಿ ಪ್ರತಿಯೊಂದು ಸರಕಿನ ಮೇಲೂ ಸಂಕಗಳು ದಿನದಿನಕ್ಕೂ ಹೆಚ್ಚುತ್ತಿರುವುದು. ಇವೆರಡು ಕಾರಣಗಳಿಂದ ಪುರ ಜನರಿಗೆ ಯಾವ ಸರಕುಗಳೂ ದೊರಕುವ ಸ್ಥಿತಿಯಲ್ಲಿಯೇ ಇಲ್ಲ.

ಬೆಲ್ಜಿಯಂನಲ್ಲಿ—ನಾಯಿ ಮಾಂಸ ಒಂದು ಪೌಂಡಿಗೆ ಆರು ರೂಪಾಯಿ ಬೆಲೆ; ಬೆಕ್ಕಿನ ಮಾಂಸ ಒಂದು ಪೌಂಡಿಗೆ ಹದಿನೈದು ರೂಪಾಯಿ ಬೆಲೆ. ದೇಶದಲ್ಲಿ ಎಲ್ಲಿ ನೋಡಿದರೂ "ಹೊಟ್ಟೆಗಿಲ್ಲ ಹೊಟ್ಟೆಗಿಲ್ಲ" ಎಂಬ ಕೂಗೇ ಕೇಳಿಬರುತ್ತಿದೆ. ಆದಾಗ್ಯೂ ದವಸ ಧಾನ್ಯಗಳು ಭರ್ತಿಯಾಗಿ ತುಂಬಿರುವ ವ್ಯಾಗನ್ನುಗಳು ಮಾತ್ರ ಜರ್ಮನಿಗೆ ಸಾಗಿ ಹೋಗುತ್ತಲಿರುತ್ತವೆ

ಗ್ರೀಸಿನಲ್ಲಿ—ಇದು ಇಟಾಲಿಯನ್ನರ ಪ್ರಭಾವ–ಎರಡೂವರೆ ಪೌಂಡು ತೂಕ ತೂಗತಕ್ಕ ಒಂದು ಬ್ರೆಡ್ಡಿಗೆ 125 ರೂಪಾಯಿ ಬೆಲೆ. ಸ್ವಲ್ಪ ಸೇವಾಂಗಾಗಿ ಇರತಕ್ಕ ಒಂದು ಜತೆ ಸೂಸ್ 750 ರೂಪಾಯಿ. ಒಂದು ಜತೆ ಕಾಲುಚೀಲಕ್ಕೆ 135 ರೂಪಾಯಿ ಬೆಲೆ.

ನಿಮಗೆ ಪದಾರ್ಥಗಳು ದೊರಕುವುದಕ್ಕೆ ಮೇಲೆ ಹೇಳಿರುವಷ್ಟು ಕಷ್ಟವಿದೆಯೇನು? ಅಥವಾ ದೊರಕಕ್ಕ ಪದಾರ್ಥಗಳಿಗೆ ಮೇಲೆ ಹೇಳಿರುವ ಊರುಗಳಲ್ಲಿ ಇರುವಷ್ಟು ಬೆಲೆ ಉಂಟೆ?

ಅಕ್ಷರಾಜ್ಯಗಳ ಅಧೀನಕ್ಕೆ ಬಂದಿರತಕ್ಕ ಪ್ರತಿಯೊಂದು ರಾಜ್ಯದಲ್ಲಿಯೂ ಈ ತೆರನಾದ ದುರವಸ್ಥೆಗಳೇ ತಾಂಡವವಾಡುತ್ತಿವೆ. ಎಲ್ಲಿ ನೋಡಿದರೂ ಪ್ರಜೆಗಳ ಹಾಹಾಕಾರ; ಹೊಟ್ಟೆಗಿಲ್ಲ ಎಂಬ ಕೂಗು ಸಾರ್ವತ್ರಿಕವಾಗಿವೆ (ರಾ. ರ.)

ಶಕ್ತಿ ಸಾಧನೆಗೆ ಸುಲಭೋಪಾಯ

ಶಕ್ತಿ

ಸೇವನೆಯಿರಲಿ ನಿಮ್ಮ ನೆನಪಿನಲ್ಲಿರಲಿ

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ಶತ್ರುಗಳು ಮುಂದಾಗಿದ್ದಾರೆ, ಕಾರ್ಯಗಳಲ್ಲಿ ಎಚ್ಚರಿಕೆಯಿಂದ ಪ್ರವರ್ತಿಸಿ, ಜನರಲ್ಲಿ ನಿಷ್ಠೂರ, ಖರ್ಚು ಹೆಚ್ಚು ಗೃಹಕೃತ್ಯದಲ್ಲಿ ನಿಷ್ಠೂರ ಭಾಷಣ, ಸಹಸ್ರನಾಮ ಪಾರಾಯಣಮಾಡಿಸಿ ಶುಭ. ತಾ. 14 15 ಶುಭ ವಾರ್ತಾ, ಜಲ್ಲಾಸ.

ವೃಷಭ

ತಾಪತ್ರಯ ಸ್ವಲ್ಪ ಶಮನವಾಗುವುದು. ಬಂಧುಮಿತ್ರಾದಿಗಳಿಂದ ಸುಖ ಕಡಮೆ ಸರ್ಕಾರಿ ಕಾರ್ಯದಲ್ಲಿ ನಿಷ್ಠೂರ ಶಾಂತತೆಯಿಂದ ವರ್ತಿಸಿ ಆದಿತ್ಯಹೃದಯ ಪಾರಾಯಣಮಾಡಿ ಶುಭ. ತಾ || 12 13 ಲಾಭ ಉತ್ಸಾಹ.

ಮಿಥುನ

ಕೆಲಸಕಾರ್ಯ ಉತ್ತಮ ಸರ್ಕಾರಿ ಕಾರ್ಯದಲ್ಲಿ ಯಶಸ್ಸು ಗೃಹಕೃತ್ಯಾನುಕೂಲತೆ ಲಾಭ. ತಾ || 18 ವ್ಯಯಾಧಿಕ ನಿಷ್ಠೂರಾಧಿಕ,

ಕರ್ಕಾಟಕ

ಬಂಧು ಮಿತ್ರಾದಿಗಳಿಂದ ಸುಖವಿಲ್ಲ ಕೆಲಸಕಾರ್ಯಗಳನ್ನು ಧೈರ್ಯದಿಂದ ಮಾಡಿ ಲಾಭ ಸುಖ ಯಶಸ್ಸು ಇರುತ್ತೆ ಆರೋಗ್ಯ ಉತ್ತಮ ಸ್ತ್ರೀಪುತ್ರ ಸೌಖ್ಯತೆ ತಾ|| 10 11 ವ್ಯಯಾಧಿಕ ಸಂಚಾರಾಧಿಕ

ಸಿಂಹ

ಕೆಲಸಕಾರ್ಯಗಳನ್ನು ಧೈರ್ಯದಿಂದ ಮಾಡಿ ಪ್ರವಾಸದಿಂದ ಲಾಭ ಸರ್ಕಾರ ಕಾರ್ಯ ಉತ್ತಮ. ತಾ || 13-14 ಕಾರ್ಯಭಂಗ ನಿಷ್ಠೂರಭಾಷಣ. ದೇವರಿಗೆ ಕ್ಷೀರಾನ್ನವನ್ನು ನಿವೇದನೆ ಮಾಡಿಸಿ ಪೂಜೆ ಮಾಡಿಸಿ ಶುಭ

ಕನ್ಯಾ

ಮನೋತ್ಸಾಹ ಸುಖ ಲಾಭ ಗೃಹಾಭಿವೃದ್ಧಿ ಶತ್ರುಂಜಯ ಉತ್ತಮ. ತಾ || 14 15 ಕೂಷ್ಮಾಂಡ ದಾನಾ ಮಾಡಿ ಫಲ ಕೂಡಿಬರುವುದು.

ತುಲಾ

ಲಾಭಕಾರ್ಯ ಉತ್ತಮ ಯತ್ನ ಕಾರ್ಯ ಸಿದ್ಧಿ ಅಧಿಕಾರ ವರ್ಗದಿಂದ ಅನುಕೂಲ ತಾಪತ್ರಯ ಶಾಂತತೆ ಉತ್ಸಾಹ. ತಾ|| 9 10 ಕುತ್ಸಿತರಿಂದ ನಷ್ಟ ಚಂಚಲತೆ ಉಷಾಕಾಲದಲ್ಲಿ ಪೂಜೆ ಮಾಡಿ ಶುಭ.

ವೃಶ್ಚಿಕ

ಸುಖ ಕಡಮೆ ವ್ಯಯಾಧಿಕ ಬಂಧು ಮಿತ್ರರಿಂದ ನಿಷ್ಠೂರ ಭಾಷಣ ಚಂಚಲತೆ ನವಗ್ರಹ ಪೂಜೆ ಮಾಡಿಸಿ ಶುಭ. ತಾ || 14 15 ಉತ್ತಮ ಫಲ,

ಧನು

ತಾಪತ್ರಯ ಜಾಸ್ತಿ ಸರ್ಕಾರಿ ಕಾರ್ಯದಲ್ಲಿ ಅಪಯಶಸ್ಸು ಗೃಹಕೃತ್ಯದಲ್ಲಿ ಸುಖ ಕಡಮೆ ವ್ಯಯಾಧಿಕ. ಸೂರ್ಯನಮಸ್ಕಾರ ಮಾಡಿ ಬ್ರಹ್ಮಚಾರಿ ಪೂಜೆ ಮಾಡಿ ಉತ್ತಮ. ತಾ || 14 ಬೂದಗುಂಬಳ ದಾನ ಮಾಡಿ ಫಲ ಉತ್ತಮವಿರುತ್ತೆ.

ಮಕರ

ಉತ್ಸಾಹ ಕಾರ್ಯಾನುಕೂಲತೆ ಸ್ತ್ರೀಪುತ್ರ ಸೌಖ್ಯ ಶುಭವಾರ್ತೆ ಉತ್ತಮ ಕಾರ್ಯದಲ್ಲಿ ಎಚ್ಚರದಿಂದ ವರ್ತಿಸಿ. ತಾ || 14 15 ಚಿಂತಾಧಿಕ ಅನಾರೋಗ್ಯ ಫಲದಾನಮಾಡಿ ಶುಭ.

ಕುಂಭ

ಉತ್ತಮ ಫಲ, ಕುತ್ಸಿತರ ಮಾತಿಗೆ ಬೆಕಗಾಗ ಬೇಡಿ ಧೈರ್ಯದಿಂದ ಕಾರ್ಯ ಮಾಡಿ ಸುಖವಿರುತ್ತೆ ತಾ || 14 15 ನಿಷ್ಠೂರ ಭಾಷಣ ಚಂಚಲತೆ ಅರ್ಚನೆ ಮಾಡಿಸಿ ಶುಭ.

ಮೀನ

ಉತ್ಸಾಹ ಆರೋಗ್ಯ ಉತ್ತಮ ಶತ್ರುಗಳು ಮೆತ್ತಗಾಗುವರು ಶುಭವಾರ್ತಾ ವ್ರಸಂಗ ತಾ || 10 ದೇವರಪೂಜೆಯಿಂದ ಕ್ಷೀರಾನದಿಂದ ಹೆಚ್ಚು ಅನುಕೂಲ.

ಸಿನಿಮಾ

ಅಮೇರಿಕಾದಲ್ಲಿ ಹಿಂದೂಸ್ಥಾನಕ್ಕೋಸ್ಕರ ಒಂದು ಸಿನಿಮಾ ತಯಾರ್ಮಾಡಿರುತಾರೆ. ಇದನ್ನು ನೋಡಿದರೆ ಹಿಂದೂಸ್ಥಾನದವರು ಮನುಷ್ಯರೇ ಅಲ್ಲ ರಾಜ್ಯವಾಳಲು ಇವರಿಂದ ಆಗದಂಥಾದ್ದು ಮೃಗಗಳು ಎನ್ನುವ ರೀತಿಯಲ್ಲಿ ತಯಾರ್ಮಾಡಿರುವರು. ಇನ್ನೇನು ಅದು ಇಲ್ಲಿಗೆ ಬರುವುದು.

ಅಕ್ಕ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೆಜು 1 ಆಣೆ. ಮುಂಗಡ ಕಳುಹಿಸಬೇಕು.

ಸತ್ಯವಾದಿ ಆಫೀಸ್ ಮೈಸೂರು

ಮಿ || ಎಮರಿ ಮತ್ತು ರಾಜರು

ಭಾರತೀಯ ಜಿವನ ವಿಧಿಗೆ ರಾಜರು ಅತ್ಯವಶ್ಯಕವಾಗಿ ಬೈಕಾದವರು. ಭಾರತದ ಭಾವೀ ರಾಜ್ಯಾಂಗವು ಯಾವುದೇ ಆಕಾರವನ್ನು ಪಡೆಯಲಿ ರಾಜರ ಸ್ಥಾನವು ಮತ್ತು ನಡಪಳಿಕೆಯು ಅಲ್ಲಿ ವಿಶೇಷವಾಗಿ ಕಂಗೊಳಿಸಬೇಕೆಂದು ಭಾರತದ ಸೆಕ್ರಿಟರಿಯ ವರಾದ ಮಿ || ಎಮರಿಯವರು ಸವನಗರದ ಜಾಮ್ ಸಾಹೇಬರ ಔತಣ ಸಮಾರಂಭದಲ್ಲಿ ಹೇಳಿದ್ದಾರೆ.

o o

ಚಿಲ್ಲರೆ ಬಿಕ್ಕಟ್ಟು

ಆಹಾರದ ಪ್ರಶ್ನೆಯನ್ನು ಬಿಟ್ಟರೆ ಬಡ ಜನರಿಗೆ ಎದುರಾಗಿರುವ ಪ್ರಗಳಲ್ಲಿ ಚಿಲ್ಲರೆ ಪ್ರಶ್ನೆಯು ಅತಿ ಪ್ರಮುಖ. ಇದನ್ನು ಪರಿಹರಿಸುವ ಬಗೆಯು ಸರಕಾರದ ಗಮನೀಯವಾದ ನೋಟಕ್ಕೆ ಬಂದಿರುವುದೆಂದೂ ಸಧ್ಯದಲ್ಲೇ ಅದು ಪರಿಹೃತವಾಗುವ ಸೂಚನೆಯಿರುವುದೆಂದೂ ತಿಳಿಯಬಂದಿದೆ.

o o

ನದೀಸ್ನಾನದಿಂದ ಮರಣ

ಕಟ್ಟಾಯಂಬಾ ಪ್ಲೋಕಿನ ಪೊನ್ನಾಯಂನಲ್ಲಿ ಯ ಪಾಟಲಿ ನದಿಯಲ್ಲಿ ಸ್ನಾನ ಮಾಡಿದ ಅನೇಕರು ಮೃತಪಟ್ಟರೆಂದೂ ನೀರಿನಲ್ಲಿ ಮಾರಕವಾದ ಯಾವುದೋ ಒಂದು ಅಂಶವು ಸೇರಿದೆಯೆಂದೂ ನಂಬಲಾಗಿದೆ.

o o

ಶ್ರೀ ಜವಹರಲಾಲರ ಭಾಷಣ

ಕಲ್ಪತ್ತಾದಲ್ಲಿ 13 ನೇ ಸೈನ್ಸ್ ಕಾಂಗ್ರೆಸ್ ಪ್ರಾರಂಭವಾದೊಡನೆ ಅಲಿ ಸೇರಿದ್ದ ಯುವಕರು, ಅಧ್ಯೆಕ್ಷರಾಗಿ ಚುನಾಯಿಸಲ್ಪಟ್ಟಿದ ಶ್ರೀ ಪಂಡಿತ ಜವಹರ ಲಾಲರ ಲಿಖಿತ ಭಾಷಣವನ್ನು ಓದಬೇಕೆಂದು ಒತ್ತಾಯ ಮಾಡಿದರು.

o o

ಪೆಚ್ಚು ಮೋರೆ ಲಾವೆಲ್

ಹಿಟ್ಲರವನ್ನು ನೋಡಲು ಹೋಗಿದ್ದ ಲಾವೆಲ್ ಫ್ರಾನ್ಸಿಗೆ ವಾಪಸ್ ಬಂದನು. ಅವನ ಜೋಲು ಮುಖದಿಂದ 15 ವರ್ಷ ಹೆಚ್ಚು ವಯಸ್ಸಾದವನಂತೆ ಕಾಣಬರುತ್ತಿರುವನಂತೆ. ಇವನು ಹಿಟ್ಲರನ ಕೊಠಡಿ ಕಾಲಿಟ್ಟೊಡನೆ ಹಿಟ್ಲರ್ ಬಾಯಿಗೆ ಬಂದಂತೆ ಮಾತನಾಡಿ ಮಂಕುಹಿಡಿಸಿಬಿಟ್ಟನಂತೆ. ಬಹು ಹೊತ್ತು ಸಂತಿದ್ದು ಕಡೆಗೆ ಕೂತುಕೊಳ್ಳಲು ಅಪ್ಪಣೆ ಬೇಡಿದನಂತೆ. ಯುದ್ಧದ ದರ್ಘಟನೆಗೆ ಫ್ರಾನ್ಸೇ ಕಾರಣವೆಂದು ಫಜೆ ಸಿದ್ದನಂತೆ.

ವಿವಿಧ ವಿಷಯ

ಕಳೆದ ಪೂರ್ಣಮಿ ದಿವಸ ಗಂಡು ಮಕ್ಕಳಿಲ್ಲದ ನೂರಾರು ಮಂದಿ ಹೆಂಗಸರ್ ಚಮೋಲಿ ದೇವಸ್ಥಾನದ ಬಾಗಿಲಲ್ಲಿ ಬೆಳಿಗ್ಗೆ ರಾತ್ರಿಯೆಲ್ಲಾ ತಲೆಯ ಮೇಲೆ ದೀಪದ ನೀಲಾಂಜನದಿಂದ ಅನುಸೂಯಾ ದೇವಿಯನ್ನು ಪ್ರಾರ್ಥಿಸುತ್ತಾ ನಿಂತು, ದೇವರನ್ನು ಆರಾಧಿಸಿದರು. ಇವರುಗಳ ಯಜಮಾನರು ಈ ಕಾರ್ಯದಲ್ಲಿ ಭಾಗವಹಿಸಿದ್ದರು. ಅನುಸೂಯಾದೇವಿಯ ಈ ಪೂರ್ಣಮಿ ದಿವಸವೇ ದತ್ತಾತ್ರೇಯನ್ನು ಹೆತ್ತಿದುದು. ಯಾರು ಈ ದಿವಸ ಚಮೋಲಿಯಲ್ಲಿ ಅನುಸೂಯಾದೇವಿಯನ್ನು ಪೂಜಿಸುವರೋ ಜನರಿಗೆ ಗಂಡು ಮಕ್ಕಳಾಗುವುವು.

o o

ವ್ರತಿ ವರ್ಷವೂ ಸಮುದ್ರದಿಂದ 1500 ಬಿಲಿಯನ್ ನೀರು ಇಂಗಿಹೋಗುತ್ತಿರುವುದೆಂದು ಗೊತ್ತುಮಾಡಿರುವರು.

o o

ಅಮೇರಿಕಾದ ಲಿಡಲ್‌ಫಿಯಾದಲ್ಲಿ ಹಾಂ ಲಿಲ್ಲೀ ಎಂಬ 76 ವಯಸ್ಸಿಸವನಿರುವನು. ಇವನನ್ನು ಕೈಕಾಲು ಕಟ್ಟಿ ಹಾಕಿದರೂ ನೀರಿನಲ್ಲಿ ಮುಳುಗುವುದಿಲ್ಲ. ಇವನ ದೇಹವು ಕಾರ್ಕಿನಿಂದ ಮಾಡಲ್ಪಟ್ಟಿರಬಹುದೇ ಎಂದು ಎಲ್ಲರೂ ಆಶ್ಚರ್ಯ ಪಡುತ್ತಿರುವರು.

o o

ಅಮೇರಿಕಾ ಸಂಯುಕ್ತ ಸಂಸ್ಥಾನದವರು ಈಗ ಪ್ರತಿ ದಿವಸವೂ ಯುದ್ಧಕ್ಕೆ ಖರ್ಚುಮಾಡುವುದು ಅವರ ಹುಟ್ಟುವಳಿಯಲ್ಲಿ ಅರ್ಧದಷ್ಟು.

o o

ಬ್ರಸಲ್ಸಿನಲ್ಲಿ ಜರ್ಮನರು ಕರ್ಫ್ಯೋ ಆರ್ಡರನ್ನು ಜಾರಿಗೆ ತಂದಿರುವರು,

o o

ಅಲಿಘಡದ ಮುಸ್ಲಿಂ ಕಾಲೇಜಿನಲ್ಲಿ ಪಾಠಹೇಳಲು ಉಪಾಧ್ಯಾಯಿನಿಯರು ಇಲ್ಲವಾಗಿ ಉಪಾಧ್ಯಾಯರನ್ನು ಫರದೆ ಹಿಂದೆ ಕೂರಿಸಿ ಪಾಠಹೇಳಿಸುತ್ತಿರುವರು.

ಅ ಹಂ ಬ್ರ ಹ್ಮ

ಬರೆದವನು — "ನಾನು"

4. ನಾನು ಯಾರು? (ಕಳೆದ ಸಂಚಿಕೆಯಿಂದ ಮುಂದುವರಿದುದು)

ನಾನು 'ಓಂ' ಕಾರ ಸ್ವರೂಪನು : 'ಓಂ' ಕಾರದಲ್ಲಿಯೇ ಅಡಗಿರುವೆನು : 'ಓಂ' ಕಾರದಿಂದಲೇ ಹುಟ್ಟಿರುವೆನು. ನಿಶ್ಶಬ್ದನು : ಶಬ್ದದಲ್ಲಿ ಅಡಗಿರುವೆನು : ಶಬ್ದವೂ ಆಗಿರುವೆನು. ಒಬ್ಬನೇ! ಎಲ್ಲರಲ್ಲಿಯೂ ಇರುವೆನ ; ಎಲ್ಲವೂ ಆಗಿರುವೆನು ನಿರ್ಗುಣನು ; ಗುಣದಲ್ಲಿ ಅಡಗಿರುವೆನು ; ಗುಣವೂ ಆಗಿರುವೆನು. ನಿರಾಕಾರನ ; ಆಕಾರದಲ್ಲಿ ಅಡಗಿರುವೆನು ; ಆಕಾರವೂ ಆಗಿರುವೆನು. ಅನಾಮಧೇಯನು ; ನಾಮದಲ್ಲಿ ಅಡಗಿರುವೆನು : ನಾಮವೂ ಆಗಿರುವೆನ.

'ಶೂನ್ಯ' ನು ; ಶೂನ್ಯದಲ್ಲಿಯೇ ಅಡಗಿರುವೆನು ; ಶೂನ್ಯದಲ್ಲಿಯೇ ಹುಟ್ಟುವೆನು.

'ಅಹಂಬ್ರಹ್ಮ' ನು. ಅಹಂಕಾರದಿಂದಲೇ ಹುಟ್ಟಿದೆನು ; ಅಹಂಕಾರದಿಂದಲೇ ನಾಶವಾಗುವೆನು.

ಅಂಶದಿಂದ ಅಂಶವನ್ನು ಕಳೆದರೆ ಉಳಿಯುವುದೇ ಶೂನ್ಯವು. ಶೂನ್ಯದಲ್ಲಿ ಅಂಶಗಳು ಅವ್ಯಕ್ತವಾಗಿ ಅಡಗಿರುವುವು. ಆದುದರಿಂದ ನಾನು ನಿರ್ಗುಣನೂ, ನಿರಾಕಾರನೂ, ನಿರಾಮಯನೂ, ನಿಷ್ಕಳಂಕನೂ, ನಿರ್ವಿಕಲ್ಪನೂ ಆಗಿರುವೆನು.

ನನ್ನಲ್ಲಿ ಹುಟ್ಟಿದ ಆಸೆಯು ನನ್ನಿಂದ ಬೇರೆಯಾಗಿ ಅವಕಾಶವನ್ನು ಅವರಿಸಿ 'ಆಕಾಶ' ವಾಯಿತು ಆಸೆಯನ್ನುಳಿದ ನಾನು 'ಸ್ವಯಂ ಪ್ರಕಾಶ' ನಾಗಿ ಆ ಆಕಾಶದಲ್ಲಿಯೇ ಅಡಗಿದೆನು. ಈ ಆಕಾಶ-ಪ್ರಕಾಶಗಳ ಸಂಯೋಗದಿಂದ ತೇಜಸ್ಸು, ತೇಜಸ್ಸಿನಿಂದ ವಾಯುವೂ, ವಾಯುವಿನಿಂದ ನೀರು ನೀರಿನಿಂದ ಪೃಥ್ವಿಯೂ ಹುಟ್ಟಿದುವು. ನಾನೇ 'ಪುರುಷ' ನಾದೆನು ! ಆಸೆಯೇ 'ಪ್ರಕೃತಿ' ಯಾಯಿತು. ಇವೆರಡರ ಸಂಯೋಗದಿಂದಲೇ ಸೃಷ್ಟಿ !

ಸಮುದ್ರದಿಂದ ಹುಟ್ಟಿದ ವೇಘವು, ಮಳೆಯಾಗಿ, ತಿರುಗಿ ಸಮುದ್ರವನ್ನೇ ಸೇರುವಂತೆ, ನನ್ನಲ್ಲಿ ಹುಟ್ಟಿದ ಆಸೆಯು ವಿಶಾಲವಾಗಿ, ತಿರುಗಿ ನನ್ನಲ್ಲಿಯೇ ಹಾಸ್ಯವಾಗುವುದು.

ಸೃಷ್ಟಿಗೆ ಆಸೆಯೇ ಮೂಲಕಾರಣವಾಗಿರುವುದರಿಂದ ಆಸೆಯಿಂದ ಅನ್ಯವಾಗಿರುವುದೆಲ್ಲವೂ, ಹುಟ್ಟಿ, ಬೆಳೆದು, ನಾಶವಾಗುತ್ತಲೇ ಇರುವುದು. ಆದುದರಿಂದ ಜನನ-ಜೀವನ-ಮರಣಗಳು ಸೃಷ್ಟಿಗೆ ಸ್ವಭಾವಸಿದ್ಧವಾಗಿವೆ.

ಆಹಾರದಿಂದ ಹಸಿವು ಅಡಗುವುದಾದರೆ ಅನುಭವಿಸಿದ ಆಸೆಯೂ ಅಡಗುವುದು. ಆದರೆ ಆಹಾರದಿಂದ ಅಡಗಿದ ಹಸಿವು ಆಹಾರದಲ್ಲಿಯೇ ಅಡಗಿಕೊಂಡಿರುವ ಗುಣವು ವಿಶೇಷದಿಂದ ಪುನಃ ಪುನಃ ಕಲೆದೋರುತ್ತಲೇ ಇರುವುದು. ಅದರಂತೆಯೇ ಅನುಭವದಿಂದ ಅಡಗಿದ ಆಸೆಯು, ಆ ಅನುಭವದಲ್ಲಿಯೇ ಅಡಗಿಕೊಂಡಿರುವ ಸುಖ ದುಃಖಗಳಿಂದಲೇ ವೃದ್ಧಿಯೊಂದುತ್ತಿರುವುದು.

ಸರ್ವ ಗುಣಗಳೂ, ಸಮಸ್ತ ಶಕ್ತಿಗಳೂ, ಸಮಸ್ತ ತತ್ವಗಳೂ ನನ್ನಲ್ಲಿ ಸಮಭಾವದಲ್ಲಿ ಅಡಗಿರುವುದರಿಂದ ನಾನು ಸರ್ವಸಮದೃಷ್ಟಿಯುಳ್ಳವನಾದೆನು.

ನನಗೆ ಜಾತಿ-ಮತ, ಕುಲ ಅಭಿಮಾನವಿಲ್ಲ ; ಕೀಳು-ಮೇಲೆಂಬ ಪಕ್ಷಪಾತವಿಲ್ಲ ; ಜನನ-ಮರಣಗಳೆಂಬ ಕೋಟಲೆಯಿಲ್ಲ ; ನಾನು-ನೀನೆಂಬ ಭೇದವಿಲ್ಲ.

ನಟನು ತನ್ನ ಪಾತ್ರಕ್ಕೆ ತಕ್ಕಂತೆ ವೇಷಧಾರಿಯಾಗಿ ರಂಗಭೂಮಿಯಲ್ಲಿ ಅಭಿನಯಿಸುವಂತೆ, ನಾನು ಜೀವರಾಶಿಯಲ್ಲಿ. ಅವರವರ ಗುಣಕರ್ಮಗಳಿಗನುಸಾರವಾಗಿ ಅಭಿನಯಿಸುತ್ತಿರುವೆನು.

ಸೃಷ್ಟಿಕರ್ತನು ಎಲ್ಲ ವೇಷಧಾರಿಗಳನ್ನೂ ತನ್ನ ಇಚ್ಛಾನುಸಾರ ಕುಣಿಸುವಂತೆ, ನಾನು ಈ ಜಗತ್ತೆಲ್ಲವನ್ನೂ ನನ್ನ ಸಂಕಲ್ಪಾನುಸಾರ ಕುಣಿಸುತ್ತಿರುವೆನು.

ನಾನು ನಕ್ಕರೆ ನೀನೂ ನಗುವೆ ; ನಾನು ದುಃಖಿಸಿದರೆ ನೀನೂ ದುಃಖಿಸುವೆ ; ನಾನು ಹುಟ್ಟಿದರೆ ನೀನೂ ಹುಟ್ಟುವೆ ; ನಾನು ನಾಶವಾದರೆ ನೀನೂ ನಾಶವಾಗುವೆ

ನಾನಿಲ್ಲದೆ ನೀನಿಲ್ಲ ; ನೀನಿಲ್ಲದಿದ್ದರೂ ನಾನು ಇದ್ದೇ ಇರುವೆನು. ಆದುದರಿಂದ ನೀನು-ಇದ್ದಲ್ಲಿ ನಾನು ಇದ್ದೇ ಇರುವೆನು ಬಹಳ ಹೇಳುವುದರಿಂದೇನು ? ಎಲ್ಲರಲ್ಲಿಯೂ, ಎಲ್ಲದರಲ್ಲಿಯೂ ಒಂದೇ ಎನಿಸಿ, 'ಅದ್ವಯ'ನಾಗಿ, ಆನಂದದಿಂದ ಬೆಳಗುತ್ತಿರುವವನೇ ನಾನು ! ಎಲ್ಲರಿಂದಲೂ, ಎಲ್ಲದರಿಂದಲೂ, ಬೇರೆಯೆನಿಸಿ 'ದ್ವಯ' ನಾಗಿ ಗಾಢಾಂಧಕಾರದಲ್ಲಿ ತೊಳಲುತ್ತಿರುವವನೇ ನೀನು !

'ಬ್ರಹ್ಮ' ನಾಗಿ ಲೋಕವನ್ನು ಸೃಷ್ಟಿಸಿದೆನು ; 'ವಿಷ್ಣು'ವಾಗಿ ಲೋಕವನ್ನು ರಕ್ಷಿಸುವೆನು ; 'ಶಿವ' ನಾಗಿ ಲೋಕವನ್ನು ಲಯಗೊಳಿಸುವೆನು.

ಸೂರ್ಯನಲ್ಲಿ ತೇಜಸ್ಸಾಗಿ ಬೆಳಗುವೆನು ; ಗಾಳಿಯಲ್ಲಿ ಪ್ರಾಣವಾಗಿ ಚಲಿಸುವೆನು ; ಸಮುದ್ರದಲ್ಲಿ ನೀರಾಗಿ ಹರಿಯುವೆನು : ಸಸ್ಯದಲ್ಲಿ ಆಹಾರವಾಗಿ ಬೆಳೆಯುವೆನು; ಪ್ರಾಣಿಗಳಲ್ಲಿ ಪ್ರಾಣವಾಗಿ ಕುಣಿಸುವೆನು ; ಬುದ್ಧಿಯಲ್ಲಿ ವಿದ್ಯೆಯಾಗಿ ಪ್ರೇರಿಸುವೆನು ; ಇಂದ್ರಿಯಗಳಲ್ಲಿ ಭೋಗಿಯಾಗಿ ಅನುಭವಿಸುವೆನು ; ಜಾಹುಗಳಲ್ಲಿ ಶಕ್ತಿಯಾಗಿ ಹೋರಾಡುವೆನು.

ಗುರುವಾಗಿ ಆತ್ಮಜ್ಞಾನವನ್ನು ಪ್ರಸರಿಸುವೆನು : ರಾಜನಾಗಿ ರಾಜ್ಯವನ್ನು ಪಾಲಿಸುವೆನು ; ದಂಡಧಾರಿಯಾಗಿ ದುಷ್ಟರನ್ನು ಶಿಕ್ಷಿಸುವೆನು : ರೋಗವಾಗಿ ಕರ್ಮಗಳನ್ನು ಪೀಡಿಸುವೆನು ; ಮೃತ್ಯುವಾಗಿ ಎಲ್ಲರನ್ನೂ ಕೊಲ್ಲುವೆನು.

ರಾವಣನಾಗಿ ವಿರಾವಣವನ್ನುಂಟುಮಾಡಿದೆನು ; ಕೃಷ್ಣನಾಗಿ ತೃಷ್ಣೆಯನ್ನು ಅಡಗಿಸಿದೆನು ; ಬುದ್ಧನಾಗಿ ಸಿದ್ಧಿಯನ್ನು ಪಡೆದೆನು : ಮಹಮ್ಮದನಾಗಿ ದುಹತ್ವವನ್ನು ಅರಿತೆನು ; ಏಸುವಾಗಿ ಆಸೆಯನ್ನು ನೀಗಿದೆನು,

ಆದರೇನು ? ಮಾಯೆಯು ಕಳೆಯಲಿಲ್ಲ. ದಾಹವು ಅಡಗಲಿಲ್ಲ. ಅಜ್ಞಾನವು ತೊಲಗಲಿಲ್ಲ. ಮಹತ್ವದ ಅರಿವಾಗಲಿಲ್ಲ ಆಸೆಯು ನಾಶವಾಗಲಿಲ್ಲ.

ಆಹಾರೋನ್ನತಿಂದ ಉಂಟಾಗುವ ವ್ಯತ್ಯಾಸವು ಶರೀರದಲ್ಲಿ ರೋಗಾದ್ಯುಪದ್ರವಗಳ ರೂಪದಲ್ಲಿ ಹೊರಬೀಳುವಂತೆ. ಜೀವರಾಶಿಯಲ್ಲಿ ಹುಟ್ಟಿದ ಗುಣಕರ್ಮಗಳ ದೋಷವು ಯುದ್ಧಾದ್ಯುಪದ್ರವಗಳ ರೂಪದಲ್ಲಿ ಪರ್ಯವಸಾನವಾಗುವುದು. ರೋಗವನ್ನು ಔಷಧದಿಂದ ಗುಣಪಡಿಸುವಂತೆ ಈ ಉಪದ್ರವಗಳನ್ನೂ ನಾನು ಯುಕ್ತ ಸಾಧನಗಳಿಂದ ಪರಿಹರಿಸುವೆನು.

ಸೃಷ್ಟಿ, ಸ್ಥಿತಿ, ಲಯಗಳು ಒಂದನ್ನೊಂದು ಅನುಸರಿಸುವುದರಿಂದ ಸರ್ವವೂ 'ಕಾಲ' ವೆಂಬ 'ವಿಧಿ' ಗೆ ಅಧೀನವಾಯಿತು ನಾನೂ ಅದಕ್ಕೆ ಅಧೀನನಾಗಿರುವೆನು.

ಈ ಬ್ರಹ್ಮಾಂಡದಲ್ಲಿರುವುದೆಲ್ಲವೂ ದೇ 'ಕಾಲ' ದ ಚಲನೆಗೆ ಅನುಸಾರವಾಗಿ ವೈದ್ಧಿಕ್ಷಯವನ್ನು ಹೊಂದುತ್ತಲೇ ಇರುವುದು.

ಆಯಾಕಾಲದ ಅವಶ್ಯಕತೆಯನ್ನರಿತು, ನಾನು ಶಂಕರನಾಗಿಯೂ, ರಾಮನಾಗಿಯೂ, ಕೃಷ್ಣನಾಗಿಯೂ, ಬುದ್ಧನಾಗಿಯೂ, ಮಹಮ್ಮದನಾಗಿಯೂ, ಏಸುವಾಗಿಯೂ, ಗುರುವಾಗಿಯೂ, ರಾಜನಾಗಿಯೂ, ಅಧಿಕಾರಿಯಾಗಿಯೂ, ಯೋಧನಾಗಿಯೂ, ಶೋಧಕನಾಗಿಯೂ, ಬಾಧಕನಾಗಿಯೂ ಜೀವರಾಶಿಗೆ ಮುಂದಿನ ಕರ್ತವ್ಯಗಳ ಬಗ್ಗೆ ಎಚ್ಚರಿಕೆಯನ್ನು ಕೊಡುತ್ತಲೇ ಇರುವೆನು.

ಇದೊಂದು ಪರ್ವಕಾಲ ! ಶಾಂತಿಯು ಮಾಯವಾಗಿ ಅಶಾಂತಿಗೆ ಪ್ರಾಯ ಒಂದಿರುವುದು ಕಷ್ಟವು ನಷ್ಟವಾಗಿ ಕಷ್ಟವು ವಿಶಿಷ್ಟವಾಗಿರುವುದು.

ಸೃಷ್ಟಿ ನಿಯಮದಂತೆ, ಸುಖದಿಂದಲೇ ಕಷ್ಟವೂ, ಕಷ್ಟದಿಂದಲೇ ಸುಖವೂ ಒಸೆದೋರುವುವು. ಶಾಂತಿಯಿಂದಲೇ ಭ್ರಾಂತಿಯು ದೂರವಾಗುವುದು. ಕತ್ತಲೆಯಲ್ಲಿಯೇ ಪ್ರಕಾಶವು ಪ್ರಜ್ವಲಿಸುವುದು.

ನಾನು ಪುನಃ ಬರುವೆನು ; ಒತ್ತಿರುವೆನು. ನನ್ನ ಆಗಮನದ ಸ್ವಾಗತ ಸಿದ್ಧತೆಯು ಆಗಲೇ ನಡೆದಿರುವುದು !

ಕಂತಲುವಾದ ವೈದ್ಯನು ಸಾಂಪತ್ತಾದ ಸಾಮಗ್ರಿಗಳನ್ನು ಸಂಗ್ರಹಿಸಿ, ಬೆಂಕಿಯಮೇಲೆ ಪಾತ್ರೆಯ ನ್ನಿಟ್ಟು ಪಾಕ ಮಾಡಿ, ರೋಗನಿವಾರಕವಾದ 'ಸಂಜೀವಿನಿ' ಯನ್ನು ಸಿದ್ಧಗೊಳಿಸುವಂತೆ, ನಾನಾದರೂ ನನ್ನ ಶಕ್ತಿಯನ್ನು 'ಪ್ರಕೃತಿ' ಯೆಂಬ ಪಾತ್ರೆಯಲ್ಲಿಟ್ಟು, ನನ್ನ ತೇಜಸ್ಸಿನ ದಬ್ಬೆ ಪಾಕಮಾಡುತ್ತಿರುವೆನು.

ಪಾಕವು ಕುದಿಯುತ್ತಿರುವುದು ; ಪಾಪವು ನಾಶವಾಗುತ್ತಿರುವುದು ; ಕತ್ತಲೆಯು ಓಡುತ್ತಿರುವುದು ; ಬೆಳಕು ಕಾಣಿಸುತ್ತಿರುವುದು.

ಸೂರ್ಯನ ಆಗಮನವನ್ನು ಸ್ವಾಗತಿಸುವ ಅರುಣನಂತೆ, ನನ್ನ ಆಗಮನವನ್ನು ಸ್ವಾಗತಿಸುವ 'ದಿವ್ಯಜ್ಯೋತಿ' ಯು ನಭೋಮಂಡಲದಲ್ಲಿ ರಾರಾಜಿಸುತ್ತಿರುವುದು. ಸ್ವಲ್ಪ ಕಣ್ದೆರೆದು ನೋಡು ! ನಿನ್ನ ದೃಷ್ಟಿಗೆ ಗೋಚರನಾಗಿರುವ ಆ 'ದಿವ್ಯಜ್ಯೋತಿ' ಯೂ ನಾನೇ ! ನಿನ್ನ ಕಣ್ಣಿಗೆ ಕಾಣಿಸುತ್ತಿರುವ ಈ 'ಧೂಮಕೇತು' ವೂ ನಾನೇ.

ಸೂಚನೆ— ಈ ಲೇಖನದ ಸರ್ವಸ್ವಾಮಿತ್ವವೂ ಪ್ರೇರಕನಿಗೆ ಸೇರಿದೆ. 'ಸತ್ಯವಾದಿ' ಪತ್ರಿಕಾಕರ್ತರ-ಮುಖಾಂತರ, ಒರೆದವರ ಅನುಮತಿಯನ್ನು ಪಡೆಯದೆ ಯಾರೂ ಇದನ್ನು ಪ್ರಕಟಿಸಬಾರದು ; ಪುಸ್ತಕ ಇತರ ಭಾಷೆಗಳಿಗೆ ತರ್ಜುಮೆಯನ್ನೂ ಮಾಡಬಾರದು.

ಸಂಸ್ಥಾನಗಳ ವಿಚಿತ್ರಗಳು

ಜಯಪುರದ ಮಹಾರಾಜರ ಹತ್ತಿರ ಒಂದು ಮುತ್ತಿನ ಸಂಚಿದೆ ಇದರಲ್ಲಿ ಒಂದೊಂದು ಮುತ್ತೂ ಒಹಳ ದೊಡ್ಡ ದಿರುತ್ತೆ. ಇಂಥಾ ಸರವೇ ಪ್ರಪಂಚದಲ್ಲಿ ಯಾರಲ್ಲಿಯೂ ಇಲ್ಲವಂತೆ.

ಂ ಂ

ಗ್ವಾಲಿಯರ್ ಮಹಾರಾಜರ ಮುತ್ತಿನ ಕಂಠಿಗಳು ಸಾವಿರಾರು ಇರುತ್ತವೆ, ಅದನ್ನು ಎಣಿಸಲು ರಾಜರಿಗೆ ಆಗುವುದಿಲ್ಲ.

ಂ ಂ

ಬರೋಡಾ ಮಹಾರಾಜರ ಹತ್ತಿರ ಒಂದು ಜನುಖಾನವಿದೆ. ಇದನ್ನು ಮುತ್ತಿನಲ್ಲೂ ಇತರ ಬೆಳ್ಳಿ ಒಂಗಾರದಲ್ಲಿ ಕೆತ್ತನೆ ಕೆಲಸ ಮಾಡಿಸುತ್ತಾರೆ. ಇವರಲ್ಲಿರುವ ಗುಂಡು ಭಂಗಾಂದ ಗಟ್ಟಿಯಿಂದ ಮಾಡಿದೆ.

ಂ ಂ

ಮಿಸ್ ರೊಸಿಟಪೋರ್ಸ್ ಬರೆಯುತ್ತಾಳೆ—ಪಾಟಿಯಾಲದಲ್ಲಿ ನನಗೆ ಅರಮನೆಯಲ್ಲಿ ಒಂದು ಕೊಠಡಿ ಕೊಟ್ಟಿದ್ದರು. ನಾನು ಮಲಗುವ ಮಂಚ ಒಂಗಾಂದ್ದು, ನನ್ನ ಉಪಯೋಗಕ್ಕೆ ಐದ ಕೊಠಡಿ. ಅರಮನೆಯಲ್ಲಿ 15 ಊಟದ ವಿಶಾಲವಾದ ಕೊಠಡಿಗಳಿವೆ. ಬೆಳಿಗ್ಗಿನಿಂದ ರಾತ್ರಿಯವರಿಗೆ ಅನೇಕಾವರ್ತಿ ಊಟಗಳು ತಿಂಡಿಗಳು ಬರುತ್ತವೆ. ಮಹಾರಾಜರ ಸಂಸಾರ ಎಷ್ಟೆಂದು ಗೊತ್ತಾಗುವುದಿಲ್ಲ. ಅವರಿಗೆ ಗಂಡು ಹೆಣ್ಣು ಮಕ್ಕಳು 87 ಎಂದು.

ಂ ಂ

ಜೋಡ್‌ಪುರ್ ರಾಣಿಯು ಹಣೆಯಲ್ಲಿ ಧರಿಸುವ ಒಂದು ಆಭರಣಕ್ಕೆ 1,8 000 ರೂಪಾಯಿಗಳು. ಇದು ಒಂದು ಪಚ್ಚೆಯಿಂದ ಮಾಡಿದೆ.

ಅವರಿದ್ದರೆ ನಾನುಬರುಲ್ಲ

ಲಾರ್ಡ್ ವಿಲಿಂಗ್ಡನ್ನರು ಇಂಡಿಯಾ ದೇಶದಲ್ಲಿ ವೈಸರಾಯರಾಗಿದ್ದಾಗ ಬೊಂಬಾಯಿನಲ್ಲಿ ಒಂದು ಕ್ಲಬ್ಬಿನವರು ಔತಣ ಕೊಟ್ಟರು. ಆ ಔತಣಕ್ಕೆ ಆಲ್ವಾರ್ ಮಹಾರಾಜರು ಬಂದರೆ, ತಾವು ಬರುವುದಿಲ್ಲವೆಂದು ಲಾರ್ಡರು ಹೇಳಿದರು. ಬೊಂಬಾಯಿನಿಂದ ಡೆಲ್ಲಿಗೆ ಆ ಕ್ಲಬ್ಬಿನ ಮುಖ್ಯಸ್ಥನು ಹೋಗಿ ವೈಸರಾಯರನ್ನು ಕಂಡು, ಆ ಕ್ಲಬ್ಬನ್ನು ಸ್ಥಾಪಿಸಿದವರು ಆಲ್ವಾರ್ ಮಹಾರಾಜರೆಂದೂ, ಆ ರೇ ಅದರ ಮೊದಲನೇ ಮೆಂಬರೆಂದೂ ತಿಳಿಸಿದರು. ವೈಸರಾಯರು ಆ ರಾಜರಿದ್ದ ಕಡೆ ತಲೆಯು ಒರಸುವುದಿಲ್ಲವೆಂದರು. ಕಡೆಗೂ ಆಲ್ವಾರ್ ರಾಜರು ಇಲ್ಲದೆ ಕೂಟವು ನಡೆಯಿತು.

ಧಾರಣೆವಾಸಿ ಹತೋಟಿ

ಅಕ್ಕಿ, ರಾಗಿ, ಸಕ್ಕರೆ ಮುಂತಾದ ಕೆಲವು ಪದಾರ್ಥಗಳನ್ನು ಸರ್ಕಾರದವರು ಇಷ್ಟಿಷ್ಟೇ ಬೆಲೆಗೆ ಮಾರಬೇಕೆಂದು ನಿರ್ಧರ ಮಾಡಿರುತ್ತಾರೆ. ಯಾತಕ್ಕೆ ಎಲ್ಲಾ ಪದಾರ್ಥಗಳನ್ನೂ ಸಹಾ ಗೊತ್ತಾದಬೆಲೆಗೆ ಮಾರಬಾರದು. ಕೂಲಿಗಳು ಗಲಾಟೆ ಮಾಡ ತ್ತಾರೆ. ಒಡನೌಕರರು ಅಂದ್ದು ಗುಮಾಸ್ತರು ಯಾವಾಗಲಾದರೂ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರವನೆ? ಐವತ್ತು ರೂಪಾಯಿ ಕೆಳಗಿನ ದರ್ಜೆಯವರ ಪಾಡು ಅಷ್ಟಿಷ್ಟಲ್ಲ. ಬ್ಲೇಡಿನ ಬೆಲೆ ಆರು ಕಾಸಿನಿಂದ ಎಳೂವರೆ ಆಣೆ ಆಗಿದೆಯಲ್ಲಾ ! ಈ ಗುಮಾಸ್ತರನ್ನು ನೋಡಿ ಆಫೀಸರ ಅಸ್ಯೂಪಟ್ಟುಕೊಳ್ಳುತ್ತಾರಲ್ಲ! ಇದ್ದುರಿಂದ ಸರ್ಕಾರದವರು ಎಲ್ಲಾ ಪದಾರ್ಥಗಳನ್ನೂ. ತರಕಾರಿ ದೊದಲ್ಗೊಂಡು ಗೊತ್ತಾದ ಬೆಲೆಗೆ ಮಾರಬೇಕೆಂದು ಗೊತ್ತುಮಾಡುವುದು ಒಳ್ಳೇದು.

ಂ ಂ

ಜಪಾನ್—ಜರ್ಮನಿ

"ವಿಜಯಪಥವು ಕ್ಲಿಷ್ಟವಾಗಿದೆ" ಯೆಂದು ಹಿಟ್ಲರನು ನುಡಿಯಬೇಕಾಗಿ ಬಂದಿದೆ. ಜಪಾನು ಜರ್ಮನಿ ಇಟಲಿಗಳ ಸಂಬಂಧ ಸೂತ್ರವು ಕಿತ್ತುಹೋಗುವ ಮುಹೂರ್ತವು ಅಸನ್ನವಾಗುತ್ತಿದೆ. ಇಟಲಿಯ ಸರ್ವಾಧಿಕಾರಿಯು ಮೆಲ್ಲಗೆ ಹಿಂದಕ್ಕೆ ಸರಿಯುತ್ತಿರುವನು. ಯುದ್ಧರಂಗದಲ್ಲಿ ರೋಮಲ್ಲು ಬೆನ್ನು ತೋರಿಸುತ್ತಿರುವನು. ಸಾಲೊಮನ್ ಸ್ಲಿಸ್ಲಿಯೂ ಬರ್ಮಾದಲ್ಲಿಯೂ ಮಿತ್ರದಳಗಳಿಗೆ ವಿಜಯವು ಲಭಿಸುತ್ತಿದೆ, ವಿನಾಶಕಾಲೆ ವಿಪರೀತ ಬುದ್ಧಿಯೆನ್ನುವ ಹಾಗೆ ತಾವೇ ಕಷ್ಟ ದೆಶೆಯಲ್ಲಿರುವ ಎಪಾನರು ಈಗ ಚಿಟಗಾಗು ನುತ್ತು ಕಲ್ಕುತ್ತೆಗಳ ಮೇಲೆ ಬಾಂಬುಗಳನ್ನು ಸುರಿಸಿರುವರು. ನಿನ್ನೆ ಮೊನ್ನೆಯವರೆಗೂ ಭಾರತ ಭೂಮಿಯನ್ನು ನೆನಸಿಕೊಂಡಾಗ ಪ್ರಣಾಮವನ್ನು ಮಾಡುತ್ತಿದ್ದ ಜಪಾನೀಯರು ತಮ್ಮ ಮತಾಚಾರ್ಯನಾದ ಶ್ರೀ ಬುದ್ಧನ ಜನ್ಮಸ್ಥಳವು ಭಾರತ ಭೂಮಿಯೆಂದು ಭಕ್ತಿಭಾವದೊಡನೆ ನುಡಿಯುತ್ತಿದ್ದ ಜಪಾನೀಯರು ಈಗ ಹೀಗೆ ಪ್ರವರ್ತಿಸಿರುವದು ಆಶ್ಚರ್ಯವಾಗಿದೆ. ಕಂಕಳಲ್ಲಿ ದೊಣ್ಣೆ ಕೈಯ್ಯಲ್ಲಿ ಶರಣಾರ್ತಿ ಎಂಬ ನಾಣ್ಣುಡಿಯು ಇವರ ವಿಷಯದಲ್ಲಿ ಸಾರ್ಥಕವಾಗುತ್ತದೆ. ಇನ್ನಾದರೂ ಜಪಾನೀಯರು ಬುದ್ಧನ ಅಹಿಂಸಾತತ್ವದ ಮಹಿಮೆಯನ್ನರಿತು ಮನುಷ್ಯತ್ವವನ್ನೂ ಮುಮುಕ್ಷುತ್ವವನ್ನೂ ಪುನರುದ್ಧರಿಸುವಂಥಾವರಾಗಲಿ.

ಬೇರೊಬ್ಬರ ಮನಸ್ಸಿನಲ್ಲಿ ನೆನಸಿದ್ದನ್ನು ಹೇಳುವ ಸರಳ ಮಾರ್ಗ

ಪುಸ್ತಕದಲ್ಲಿ ಅವನಿಗೆ ಮನಸ್ಸಿಗೆ ಬಂದ ಪುಟದಲ್ಲಿ ಮೊದಲನೇ 10 ಪಂಗ್ತಿಗಳಲ್ಲಿ ಯಾವುದಾದರೊಂದು ಪಂಗ್ತಿಯಲ್ಲಿ ಪಂಗ್ತಿಯ ಕೊನೆಯಿಂದ 10 ಪದಗಳಲ್ಲಿ ಯಾವುದಾದರೊಂದು ಪದವನ್ನು ಗುರ್ತು ಹಚ್ಚಿಕೊಳ್ಳಲು ನಿಮ್ಮ ಸ್ನೇಹಿತನಿಗೆ ತಿಳಿಸಿರಿ. ಆ ತರುವಾಯ ಪುಟದ ಸಂಖ್ಯೆಯನ್ನು ಎರಡರಿಂದ ಗುಣಿಸಿ ಒಂದ ಲಭ್ಧವನ್ನು ಪುನಃ 5 ರಿಂದ ಗುಣಿಸಿ 20 ನ್ನು ಆ ಸಂಖ್ಯೆಗೆ ಸೇರಿಸಲಿಕ್ಕೆ ಹೇಳಿ. ಕರವಾಯ ಪಂಗ್ತಿಯ ಸಂಖ್ಯೆಗೆ 5 ನ್ನು ಸೇರಿಸಿ, ಮೇಲ್ಕಂಡ ಸಂಖ್ಯೆಯೊಂದಿಗೆ ಬೆರಿಸಿ ಒಟ್ಟು ಮೊತ್ತವನ್ನು 10 ರಿಂದ ಗುಣಿಸಲು ಇದಾದ ಮೇಲೆ ಆ ಸಂಖ್ಯೆಗೆ ಪಂಗ್ತಿಯಲ್ಲಿ ಎಷ್ಟನೇ ಪದವೋ ಆ ಸಂಖ್ಯೆಯನ್ನು ಬೆರಸಿ 250 ನ್ನು ಕಳಿಯಲಿಕ್ಕೆ ಹೇಳಿ. ಉತ್ತರವೆಷ್ಟು ಎಂದು ಕೇಳಿ. ಮಸಲಾ ಉತ್ತರವು 40285 ಆದಲ್ಲಿ 402ನೇ ಪುಟದಲ್ಲಿ 8 ನೇ ಪಂಗ್ತಿಯ 5 ನೇ ಪದವನ್ನು ತೆಗೆದು ತೋರಿಸಿ, ಎಲ್ಲರನ್ನೂ ನಿಮ್ಮ ಶಕ್ತಿಯು ಆಶ್ಚರ್ಯಗೊಳಿಸುವದು

ಂ ಂ

ಬರ್ಟ್ರಾಂ ರಸಲ್‌ರವರ ಪ್ರವಚನ

ಅಂಗ್ಲ ಗ್ರಂಥಕರ್ತರು ಆಗಾಂದಾಗ್ಯೆ ಭಾರತ ಸಮಸ್ಯೆಗಳ ಕಡೆ ತಮ್ಮ ದೃಷ್ಟಿಯನ್ನು ಸ್ಪರ್ಶಿಸುತ್ತಿರುತ್ತಾರೆ ಕಿಪ್ಲಿಂಗ್ ವೆಲ್ಸ್, ಒನಾರ್ಡ್‌ಷಾ, ಬೆರ್‌ಟ್ರ್ಯಾಂರ ಸ್ಸಲ್ ಮಹಾಶಯರು ಇವರಲ್ಲಿ ಮುಖ್ಯರು. ಕಿಪ್ಲಿಂಗ್‌ರು ಭಾರತ ದೇಶದಲ್ಲಿ ಕೆಲವು ಕಾಲ ವಾಸಮಾಡಿದರು. ಪಾಶ್ಚೀ ಪ್ರತೀಚೀ ಭೂಮಿಗಳ ಸೇರುವಿಕೆಯು ಅಕಾಶ ಕುಸುಮವೆಂದು ಅಪಹಾಸ ನುಡಿದಿರುವರು. ವೆಲ್ಸರವರು ಭಾರತಾಶಯಗಳನ್ನು ಗ್ರಹಿಸಿದರು. ಬರ್ನಾರ್ಡ್‌ಷಾರವರ ವಚನಗಳು ಬಿಸಿಬಿಸಿಯಾದ ಕಷಾಯದಂಥವುಹ. ಪ್ರಸ್ತುತ ಯುಗದಲ್ಲಿ ಕಾಣಬರುತ್ತಿರುವ ಲೋಪಗಳನ್ನು ಈತನು ಎತ್ತಿ ತೋರಿಸುವನು. ರಸ್ಸಲರವರ ವಚನಗಳಾದರೋ ಶಾತ್ವಕ ಸಂಪದದಿಂದ ತುಂಬಿರುತ್ತದೆ. ಆಧುನಿಕ ಪ್ರಪಂಚದಲ್ಲಿ ಸ್ವಾತಂತ್ರ್ಯವನ್ನು ಪಡೆಯಲು ಯಾವ ದೇಶಕ್ಕಾದೂ ಹಕ್ಕು ಇರುವಂತೆ ಭಾರತ ದೇಶಕ್ಕೂ ಇರುವದೆಂದು ಈತನು ತಿಳಿಸಿರುವನು. ಇಂಥಾ ಪ್ರಮುಖ ಅಭಿಪ್ರಾಯಗಳು ಅಮೂಲ್ಯವಾದವುಗಳು ಯುದ್ಧಾನಂತರದ ಸ್ಥಿತಿಗೆ ಇವು ಅಡಿಗಲ್ಲುಗಳಾಗಿ ಪರಿಣಮಿಸುವು.

ನಿಮಗೆ ಗೊತ್ತೇ?

ಕೆಂಪು ಒಣ್ಣಿಂದ ಬರೆಯುವ ಪೆನ್ಸಿಲ್ಲು ಇಂಡಿಯಾ ದೇಶಕ್ಕೆ, ಸುಮಾರು 1877 ನೇ ಇಸ್ವಿಯಲ್ಲಿ ಬಂದಿತು.

ನಾದಿರ್‌ಷಹನು ಓದುಭರಹಗಳನ್ನು ಮುದಿತನದಲ್ಲಿ ಕಲಿತನು. ತನ್ನ ಮನೋಭಿಪ್ರಾಯವನ್ನು ಸಕ್ಕೆ ಮೂಲಕ ಒರೆದು ತಿಳಿಸುವ ಸಾಮರ್ಥ್ಯ ಹೊಂದಿದ್ದನು.

ಆನೆಗಳಿಗೆ ವಾರಕ್ಕೆ ಒಂದು ಟ್ಟ ಹುಲ್ಲು, ದಿನಂದ್ರತಿ ಎರಡು ಸೇರು ಸಕ್ಕರೆಯೂ ಬೇಕಾಗುತ್ತದೆ.

ರದ್ಯಾಕ್ಷಿಯ ಗಿಡವು ಭಾರತ ದೇಶಕ್ಕೆ ಬಂದದ್ದು ಸಿಂಗಪೂರಿನಿಂದ.

ಸಾಧಾರಣ ಮನುಷ್ಯನು ವರ್ಷಕ್ಕೆ ಒಂದು ಟ್ಟ ನೀರನ್ನು ಕುಡಿಯುತ್ತಾನೆ.

ಅವೇರಕಾಡ ಹೆಂಗಸರ ಸಾದರಕ್ಷೆಗೆ ಹಿಮ್ಮಡಿಯಲ್ಲಿ ಒಂದು ' ಜಾಕ್ ' ಇರುತ್ತದೆ ಅದರ ಸಹಾಯದಿಂದ ಅವು ಎಲ್ಲರಿಗೂ ಉಪಯೋಗ ಪಡುವಂತಾಗುತ್ತವು.

ನೀಗ್ರೋಗಳು ಸುಟ್ಟ ಕಡ್ಡಿಗಳಿಂಲ ಹಲ್ಲುಜ್ಜಿಕೊಳ್ಳುವದು ವಾಡಿಕೆಯಲ್ಲಿದೆ.

ಮೋಟಾರು ಡ್ರೈವರು. ತೂಕಡಿಸಿದಾಗ ಚಕ್ರದ ಹಿಡಿತವು ಸಡಲವಾಗುವದು. ಅವನು ತೂಕಡಿಸದಂತೆ ಮಾಡಲು ಅಮೋನಿಯಾ ಹಬೆಯನ್ನು ಅವನ ಮುಖದ ಮೇಲೆ ಜಡಿಯು ಯಂತ್ರವೊಂದನ್ನು ತಯಾರಿಸಿರುವರು.

ಸಿಹಿ ಕಿತ್ತಲೆ ಹಣ್ಣು ಈ ದೇಶಕ್ಕೆ ಮಲಯಾ ದೇಶದಿಂದ ಬಂದುದಾಗಿದೆ.

ಕರ್ಬೂಜಾ ಹಣ್ಣು ಬ್ಲೇಬರ್ ಕಾಲದಲ್ಲಿ ಈ ದೇಶಕ್ಕೆ ಕಾಬೂಲಿನಿಂದ ತರಲ್ಪಟ್ಟಿತು

ಮೆಣಸಿನಕಾಯಿಯು ಈ ದೇಶಕ್ಕೆ ವೆಸ್ಟ್ ಇಂಡೀಸ್ ದ್ವೀಪದಿಂದ ಪೋರ್ಚುಗೀಸರ ಕಾಲದಲ್ಲಿ ಒಂದಿತು.

ಪಂಗೀಹಣ್ಣು 1598 ರಲ್ಲಿ ಲಿಂಸೊಟೆನ್ ಎಂಬ ಡಚ್ ಪ್ರಯಾಣೀಕನಿಂದ ಭಾರತ ದೇಶಕ್ಕೆ ಬಂದಿತು.

ಹೊಸ ರೇಡಿಯೊ

ಈಗ ಒಂದು ರೇಡಿಯೋವನ್ನು ತಯಾರಿಸುತ್ತಿರುವರು. ಇದು ಆರು ಇಂಚು ಉದ್ದವಾಗಿಯೂ ಎರಡು ಇಂಚ್ಚು ಅಗಲವಾಗಿಯೂ ಇರುತ್ತದೆ. ಇದರಲ್ಲಿರುವ ವಾಲ್ವ್‌ಗಳು ಕೇವಲ ಒಂದು ಗುಲಗಂಜಿಯಷ್ಟು ಗಾತ್ರವಿರುತ್ತೆ- ಇದನ್ನೂ ಎಲ್ಲರ ಜೇಬಿನಲ್ಲಿ ಇಟ್ಟುಕೊಂಡು ಬೀದಿಯಲ್ಲಿ ಹೋಗುತ್ತಿರುವಾಗಲೇ ಸ್ವದೇಶದ ಪರ್ತವಾನವನ್ನು ಕೇಳುತ್ತಿರಬಹುದು ಕೂಲಿಯವರು ಕೆಲಸಮಾಡುತ್ತಾ ಸಂಗೀತವನ್ನು ಕೇಳುತ್ತಿರಬಹುದು.

ಚಲನಚಿತ್ರ ಪ್ರಪಂಚಕ್ಕೆಲ್ಲಾ ಅಖಿಲ ಕರ್ನಾಟಕದ ಹೆಮ್ಮೆಯ ವಾರ್ತೆ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್

ಗಾಂಧಿ ಸ್ಕ್ವೇರ್, ಮೈಸೂರು ಇವರ

ಸಂಗೀತರತ್ನ ಆಸ್ಥಾನ್ ವಿದ್ವಾನ್ ಟಿ. ಚೌಡಯ್ಯನವರು

ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಚಲನಚಿತ್ರ

— ತಾರಾಗಣ —

ಶ್ರೀಮತಿ ಬಳ್ಳಾರಿ ಲಲಿತ, ಟಿ. ಎಸ್ ಚಂದ್ರ ಕುಮಾರಿ ರತ್ನ, ಪಂಡರೀಬಾಯಿ,
ಧನಭಾಗ್ಯಂ, ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್
ಬಿ. ವಿ. ಕೆ. ಮೂರ್ತಿ, ಬಿ. ಎಸ್. ಸುಬ್ಬಯ್ಯ, ಎಂ. ಮಾಧವರಾವ್
ಹೆಚ್. ಆರ್. ಶಾಸ್ತ್ರಿ, ಎಂ. ಆರ್. ಪಿ. ಸಾರಥಿ,
ಶ್ರೀಮತಿ ಕೆ. ಎಂ. ಶಾಂತಿರಾಜಮ್ಮ.

ನಿಮ್ಮ ಊರಿನ ಮೆಚ್ಚಿನ ಚಿತ್ರ ಮಂದಿರಗಳಲ್ಲಿ

ಎದುರುನೋಡಿ

ನಿರ್ದೇಶಕರು— ಜಿ. ಆರ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ ಚೌಡಯ್ಯನವರು
ತಯಾರಿಕೆ— ನಾಹಕಾರ್ ಟಿ ಎಸ್ ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್.

— ಹೆಚ್ಚಿನ ವಿವರಗಳಿಗೆ —

ಜಿ. ಆರ್. ರಾಮಯ್ಯ; ಮ್ಯಾನೇಜಿಂಗ್ ಏಜೆಂಟ್ಸ್, ಇವರಲ್ಲಿ ತಿಳಿಯಿರಿ.

ಮಗುವನ್ನು ಆನಂದವಾಗಿಡಿ, ಅವನಿಗೆ ಕೊಡಿ

ಗ್ರೈಪ್ ನಿರಪ್

ವ್ಯಾಪಾರದ ITL ಗುರುತು

ಮಕ್ಕಳಿಗೆ ಆದರ್ಶ ಔಷಧಿ

ಆಹಾರದ ತೊಂದರೆ, ಹೊಟ್ಟೆ ಹಿಡಿತ, ಹಲ್ಲು ಬರುವಾಗ ಆಗುವ ತೊಂದರೆ ಇತ್ಯಾದಿಗಳನ್ನು ನಿವಾರಿಸುತ್ತದೆ.

ಸೇವಿಸಲು ರುಚಿಕರ
ಮತ್ತು ಬರುವ ಮೊಲಿಕೆಗಳ ವಿಶ್ರಾಣವಿಲ್ಲ
ಕ್ಷೇಮಕರ ಮತ್ತು ಗುಣಕಾರಿ

— ತಯಾರಿಕರು —

ಗೌರ್ನಮೆಂಟ್ ಇಂಡಸ್ಟ್ರಿಯಲ್ ಆಂಡ್ ಟೆಸ್ಟಿಂಗ್ ಲೆಬೊರೇಟರಿ
ಮಲ್ಲೇಶ್ವರಂ, ಬೆಂಗಳೂರು.

ಶ್ರೀ ಪರಶುರಾಂ ಹಾಲ್
ಪ್ರೊ॥ ಧೊಂಡೋಜಿರಾವ್
ಎಂಡ್ ಸನ್ಸ್
ಸಯ್ಯಾಜಿರಾವ್ ರೋಡು
ಮೈಸೂರು

ನಮ್ಮಲ್ಲಿ ಎಲ್ಲಾ ವಿಧದ ಬಟ್ಟೆಗಳೂ, ಕ್ವಲ್ಟ್‌ಗಳೂ, ಸುಲಭ ಬೆಲೆಗೆ ದೊರೆಯುತ್ತೆ.

ಮತ್ತು ಹೊಲಿಗೆ ಕೆಲಸವು ನಿಮ್ಮ ಮನಸ್ಸಿಗೆ ಒಪ್ಪುವಂತೆ ಅಂದವಾಗಿ ಮಾಡಲಾಗುತ್ತೆ.

ಮೈಸೂರು ವೈಶ್ಯ ಪತ್ರಿಕೆ

ಈ ಉತ್ತಮ ಸಚಿತ್ರ ಕನ್ನಡ-ತೆಲಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ ರೂ. 2-4-0

ಬಿಡಿ ಪ್ರತಿ 4 ಆಣೆ.

ಕಾರ್ಯಾಲಯ ;

ಶ್ರೀ ವಾಸವಾಂಬ ಭವನ

ಅಶೋಕಾ ರಸ್ತೆ — ಮೈಸೂರು.

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

TG. ಮಾರ್ಕಿನ ಹಿಂಗನ್ನು

ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

Marriage Gazette

The only illustrated monthly o urnal of its kind in India containing very interesting aud instructive articles on matrimonia topics.

Apply....

The Indian Marriage Gazette
Bangalore City